ಒಂದೇ. **Fluctuation** ತೋರುವುದಿಲ್ಲ. ಇದನ್ನು ಅಧ್ಯಯನ ಮಾಡಬೇಕಾಗುತ್ತದೆ. ಸುಮಾರು ನಲವತ್ತು ವರ್ಷಗಳಿಂದ ಬರೆಯುತ್ತಿದ್ದರೂ ಅವರ ಕತೆಗಳು ಒಂದೇ ವಯೋಮಾನದವರು ಬರೆದ ಕತೆಗಳಂತೆ ಕಾಣುತ್ತದೆ. ಯಾಕೆ ಏರಿಳಿತಗಳಿಲ್ಲ? ತನ್ನಲ್ಲಿಯೇ ಕಟ್ಟಿಕೊಂಡ ಕಲ್ಪನೆಗೆ ತಾನೇ ಮೋಹಿಸಿದ್ದು ಕಾರಣವಿರಬಹುದೇ? ಅದಕ್ಕೆ ಒಗ್ಗಿಬಿಟ್ಟರೇನೋ. ಈ ಏಕತಾನತೆಯೇ ಸಾಹಿತ್ಯ ಲೋಕದಲ್ಲಿ ಅವರ ನಿರ್ಲಕ್ಷ್ಯಕ್ಕೆ ಕಾರಣವಾಯಿತೇ? **structure**ನಲ್ಲೂ ಭಿನ್ನತೆಯಿಲ್ಲ. ಕನ್ನಡ ಸಾಹಿತ್ಯವನ್ನು ನೋಡಿ ವ್ಯಾಸರು ತನ್ನ **structure** ಅನ್ನು ಬದಲಿಸಬೇಕಾಗಿತ್ತು ಎಂದರ್ಥವಲ್ಲ. ಆದರೆ ಲೇಖಕ ತನಗಾಗಿಯೇ ಹೊಸದೊಂದು **structure** ಅನ್ನು ಯಾಕೆ ಪ್ರಯೋಗಿಸಲಿಲ್ಲ? ತಾನು ಬೇರೆ ಸಾಹಿತ್ಯವನ್ನು ಹೆಚ್ಚು ಓದಿದವನಲ್ಲ ಎಂದು ವಿನೀತನಾಗಿ ಹೇಳಿಕೊಂಡಿದ್ದಾರೆ ನಿಜ. ಆದರೆ ಅದನ್ನೊಂದು ಮಾಡಿದ್ದರೆ ಬೇರೆಯೇ ಒಂದು ಆಯಾಮ ಅವರ ಕತೆಗಳಿಗೆ ಸಿಗುತ್ತಿತ್ತು.

ವ್ಯಾಸರ ಕಾವ್ಯಕ್ಕೂ ಈ ಮಾತುಗಳು ಅನ್ವಯಿಸುತ್ತವೆ. ವ್ಯಾಸರ ಕಾವ್ಯ ಕೂಡ ಕತೆಯ ಹಾಗೇ ಇದೆಯೇ ಹೊರತು ಕಾವ್ಯಕ್ಕೆ ಇರಬೇಕಾದ ಸೂಕ್ಷ್ಮತೆ ಕಡಿಮೆ ಇದೆ. ಮನುಷ್ಯನ ಮನಸ್ಸಿನಲ್ಲಿ ಸಂಭವಿಸುವ ಹಠಾತ್ ಸ್ಫೋಟ ಮತ್ತು ಅದರಿಂದುಂಟಾಗುವ ಭಯ ಅವರನ್ನು ಕಾಡಿದೆ. ಅವರ ಕವನಗಳಿಗೂ ಇದೇ ವಸ್ತು. ಕತೆಗಳಲ್ಲಿ ಹೇಳಿರುವುದಕ್ಕಿಂತ ಭಿನ್ನವಾದುದೇನನ್ನೂ ಕವಿತೆಗಳಲ್ಲಿ ಹೇಳಿದಂತೆ ಕಾಣುವುದಿಲ್ಲ. ಕುಸಿದ ಮನಸ್ಸಿನ ಯಾತನೆಯಲ್ಲೇ ಮತ್ತೆ ಪುಟಿದೇಳಬೇಕೆನ್ನುವ ಧೋರಣೆ ಅವರದ್ದು. ದುಃಖದ ಆದಿಯಲ್ಲೇ ಸುಖ, ಸುಖದಿಂದ ಭಯ, ಭಯದಿಂದ ಸಾವು – ಈ ನಿರಂತರ ಚಲನೆಯನ್ನು ತೋರಿಸುವ ರಚನೆಗಳು ಇಲ್ಲಿವೆ.

ತನ್ನನ್ನು ತಾನು ಜಿಜ್ಞಾಸೆಗೆ ಗುರಿಪಡಿಸಿಕೊಳ್ಳಬೇಕು ಎನ್ನುವುದು ಅವರ ನಿಲುವು. ನಮ್ಮನ್ನು ನಾವು ತಿಳಿದುಕೊಂಡಾಗ ಮಾತ್ರ ಸುತ್ತಲಿನ ಜೀವಜಗತ್ತನ್ನು ತಿಳಿಯುವುದು ಸಾಧ್ಯ. ಬದುಕೆಂಬ ನಿತ್ಯಹೋರಾಟದಲ್ಲಿ ಬರುವ ವಿಸಂಗತಿಗಳನ್ನು ಜೋಡಿಸುವ ವಿಶಿಷ್ಟ ಪ್ರತಿಭೆ ವ್ಯಾಸರದ್ದು. ಅವರು ಕತೆಗಳಲ್ಲಿ ಹೇಳುವುದನ್ನು ನಾವು ನಮ್ಮ ಸಂದರ್ಭದಲ್ಲಿ ಅನುಭವಿಸಿದರೆ, ಸಿದ್ಧಗೊಂಡಿರುವ ವಿಮರ್ಶೆಯ ನೋಟಕ್ಕಿಂತ ಭಿನ್ನವಾದ ಯೋಚನೆಗಳು ಹೊಳೆಯಬಹುದು. ವ್ಯಾಸರ ಹಾಗೆ ರುದ್ರಕಾಲದ ಲಯಗಳನ್ನು ಹಿಡಿದವರು ಅತಿ ವಿರಳ.

### ಕಿ.ರಂ. ನಾಗರಾಜ

ಬಹುಮುಖಿ ಚಿಂತಕ ಕಿ.ರಂ. ಮೌಖಿಕ ಪರಂಪರೆಯಲ್ಲಿ ನಂಬಿಕೆ ಇಟ್ಟು ಜಗತ್ತಿನ ಎಲ್ಲ ಸಂಗತಿಗಳ ಬಗ್ಗೆ ಮಾತನಾಡುತ್ತ, ಚಿಂತನೆಗೆ, ಬರವಣಿಗೆಗೆ ಪ್ರೇರಣೆ ನೀಡುತ್ತ ಬದುಕಿದ ವಿದ್ವಾಂಸ. ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕರಾಗಿ ಕೆಲಸ ಮಾಡಿ ನಿವೃತ್ತರಾಗಿದ್ದರು. ಅವರ ಪುಸ್ತಕಗಳು: 'ನೀಗಿಕೊಂಡ ಸಂಸ','ಕಾಲಜ್ಞಾನಿ ಕನಕ'(ನಾಟಕಗಳು), ಪ್ರಾತಿನಿಧಿಕ ಬರಹಗಳ ಸಂಗ್ರಹ–'ತೆರೆದ ಪಠ್ಯ' (ಸಂ: ನಟರಾಜ್ ಹುಳಿಯಾರ್).

### ಎಂ. ವ್ಯಾಸ

ಕವಿ, ಕತೆಗಾರ, ವ್ಯಾಸ ಕಾಸರಗೋಡಿನವರು. ತಮ್ಮ ಎರಡಕ್ಷರದ ಕತೆಗಳಿಂದ ಗುರುತಿಸಿಕೊಂಡಿದ್ದ ಅವರು ಸೃಷ್ಟಿಸಿದ ಕಥಾಜಗತ್ತು ಕನ್ನಡ ಕಥಾಜಗತ್ತಿನಲ್ಲೇ ವಿಶಿಷ್ಟವಾಗಿತ್ತು. 'ಕೃತ', 'ಕಂಬನಿ', 'ಸುಳಿ', 'ಕ್ಷೇತ್ರ', 'ಸ್ನಾನ' ಅವರ ಪುಸ್ತಕಗಳಾಗಿವೆ. ಅವರು ಸುಮಾರು 700 ಕತೆಗಳನ್ನು ಬರೆದಿದ್ದಾರೆ.